ನಿವೇಶನಗಳನ್ನು ಹಂಚಲು ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಸರ್ಕಾರ ರಚಿಸಿರುವ ಸಮಿತಿಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆಯೆ?

ಆ) ಫಲಾನುಭವಿಗಳನ್ನು ಆಯ್ಕೆ ಮಾಡಲು ಸರ್ಕಾರ ನಿರ್ದಿಷ್ಟ ಸೂಚನೆಗಳನ್ನೇನಾದರೂ ಸೃಷ್ಟಿಸಿದೆಯೆ?

ಇ) ಈ ಆಯ್ಕೆಯಲ್ಲಿ ವಿಳಂಭವನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಹೌದು.

ಆ) ಹೌದು

ಇ) ಆಶ್ರಯ ಸಮಿತಿಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಕಾಲಪರಿಮಿತಿಯನ್ನು ನೀಡಲಾಗಿದೆ. ಮತ್ತು ಆಶ್ರಯ ಸಮಿತಿಗಳಿಗೆ ಈ ಕಾಲಪರಿಮಿತಿಯೊಳಗೆ ಆಯ್ಕೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕೋರಲಾಗಿದೆ.

ರಾಜ್ಯದಲ್ಲಿ ಖಾಸಗಿ ಬಸ್ಸುಗಳ ಪ್ರಯಾಣ ದರ

4911 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಖಾಸಗೀ ಬಸ್‌ಗಳ ಪ್ರಯಾಣ ದರವನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ನಿರ್ದಿಷ್ಟ ಸೂಚನೆಗಳನ್ನು ನೀಡಿದೆಯೇ?

2) ಈ ಸೂಚನೆಗಳ ಆಧಾರದ ಮೇಲೆಯೇ ಖಾಸಗೀ ಬಸ್‌ಗಳ ಪ್ರಯಾಣ ದರವನ್ನು ನಿಗದಿಪಡಿಸಲಾಗಿದೆಯೇ?

3) ಕಳೆದ ಮೂರು ತಿಂಗಳಲ್ಲಿ ಖಾಸಗೀ ಬಸ್ ಮಾಲೀಕರು ಪ್ರಯಾಣ ದರವನ್ನು ಪರಿಷ್ಕರಿಸಿದ್ದಾರೆಯೇ? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ನೀಡಿದೆ.

ಆ) ಅಧಿಸೂಚನೆ ಸಂ:ಹೆಚ್‌ಟಿಡಿ 91 ಟಿಎಂಎ 96, ದಿನಾಂಕ: 14-11-96 ರಲ್ಲಿ ಮಜಲು ವಾಹನಗಳ ಗರಿಷ್ಠ ಪ್ರಯಾಣ ದರವನ್ನು ಸರ್ಕಾರವು ನಿಗದಿಪಡಿಸಿ, ಗರಿಷ್ಠ ಮಿತಿಯೊಳಗೇ ದರಗಳನ್ನು ಜಾರಿಗೆ ತರುವಂತೆ ರಾಜ್ಯ ಸಾರಿಗೆ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿತ್ತು. ಸರ್ಕಾರದ ನಿರ್ದೇಶನದ ಮೇರೆಗೆ ರಾಜ್ಯ ಸಾರಿಗೆ ಪ್ರಾಧಿಕಾರವು ಅಧಿಸೂಚನೆಯಲ್ಲಿನ ಕನಿಷ್ಠ ಮತ್ತು ಗರಿಷ್ಠ ದರಗಳ ಮಿತಿಯೊಳಗೆ ದರಗಳನ್ನು ನಿಗಧಿಪಡಿಸಿ ಜಾರಿಗೊಳಿಸುವಂತೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳಿಗೆ ಸೂಚನೆ ನೀಡಿದ್ದು,

ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಆಯಾ ಪ್ರದೇಶ ವ್ಯಾಪ್ತಿಯಲ್ಲಿನ ಭೌಗೋಳಿಕ ಸನ್ನಿವೇಶ ಮತ್ತು ಇತರೇ ಅಂತಗಳನ್ನು ಪರಿಗಣನೆಗೆ ತೆಗೆದುಕೊಂಡು ದರಗಳನ್ನು ನಿಗಧಿಪಡಿಸಿರುತ್ತವೆ.

3) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಚಾಮರಾಜನಗರಗಳ ವ್ಯಾಪ್ತಿಯಲ್ಲಿ ಮಾತ್ರ ಖಾಸಗೀ ಮಜಲು ವಾಹನಗಳ ದರಗಳನ್ನು ಪರಿಷ್ಕರಿಸಿ ಜಾರಿಗೊಳಿಸಿದ್ದಾರೆ. (ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಒದಗಿಸಿದೆ).

ಖಾಸಗೀ ಬಸ್‌ಗಳು ಆಚರಣೆಯಲ್ಲಿರುವ ಇತರ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಗಳಾದ ಬೆಂಗಳೂರು ಗ್ರಾಮಾಂತರ, ತುಮಕೂರು, ದಾವಣಗೆರೆ, ಕೋಲಾರ, ಮಂಡ್ಯ, ಮಡಿಕೇರಿ, ಚಿತ್ರದುರ್ಗ, ಮೈಸೂರುಗಳ ವ್ಯಾಪ್ತಿಯಲ್ಲಿ ಬಸ್ ದರಗಳನ್ನು ಕಳೆದ ಮೂರು ತಿಂಗಳಲ್ಲಿ ಪರಿಷ್ಕರಿಸಿರುವುದಿಲ್ಲ.

ಪೆಟ್ರೋಲ್ ಮತ್ತು ಡೀಸಲ್ ಬೆಲೆಗಳಲ್ಲಿ ದಿನಾಂಕ 29-09-2000 ರಿಂದ ಹೆಚ್ಚಳವಾದ ಪರಿಣಾಮ ಖಾಸಗೀ ಬಸ್ ಮಾಲೀಕರುಗಳು ಓಡಿಸುವ ಭಾಗಗಳಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ನಿಗದಿಪಡಿಸಿರುವ ದರಗಳು ಮತ್ತು ಹಿಂದೆ ಇದ್ದ ದರಗಳು ಈ ಕೆಳಕಂಡಂತಿವೆ

ಕ್ರ ಸಂ.	ಪ್ರಾದೇಶಿಕ ಸಾರಿಗೆ ಪ್ರಾಧಿಕಾರ	ದಿನಾಂಕ 29-09-2000ಕ್ಕೆ ಹಿಂದೆ ಚಾಲ್ತಿಯಲ್ಲಿದ್ದ ಮಜಲು ವಾಹನಗಳ ಪ್ರಯಾಣ ದರಗಳು	ಡೀಸಲ್ ಮತ್ತು ಪೆಟ್ರೋಲ್ ಬೆಲೆಯಲ್ಲಿ ಹೆಚ್ಚಳವಾದ ತರುವಾಯ ಆಕ್ಟೋಬರ್ 2000 ಮಾಹೆಯಲ್ಲಿ ಪುನರ್ ನಿಗಧಿಪಡಿಸಿದ ದರಗಳು
1.	ಶಿವಮೊಗ್ಗ	ಪ್ರತಿ ಕಿ.ಮೀ.ಗೆ 40 ಪೈಸೆ	ಪ್ರತಿ ಕಿ.ಮೀ.ಗೆ 44 ಪೈಸೆ
2.	ಚಾಮರಾಜನಗರ	" 35 "	" 38 "
3.	ಚಿಕ್ಕಮಗಳೂರು	" 38 "	" 42 " (6.5 ಕಿ.ಮೀ.ನ ಹಂತಕ್ಕೆ ರೂ. 2-75)
4.	ಉಡುಪಿ	6.5 ಕಿ.ಮೀನಹಂತಕ್ಕೆ ರೂ. 2-75	6.5 ಕಿ.ಮೀ.ನ ಮೊದಲ ಹಂತಕ್ಕೆ ರೂ. 3-00 (ಪ್ರತಿ ಕಿ.ಮೀ.ಗೆ ಸರಾಸರಿ 46 ಪೈಸೆ) ಎರಡನೇ ಹಂತ ಮತ್ತು ಆ ನಂತರದ ಹಂತಗಳಲ್ಲಿ ಪ್ರತೀ ಕಿ.ಮೀ.ಗೆ ಸರಾಸರಿ 40 ಪೈಸೆಯಂತೆ ನಿಗಧಿಪಡಿಸಲಾಗಿದೆ.
5.	ಮಂಗಳೂರು	6.5 ಕಿ.ಮೀ.ನ ಹಂತಕ್ಕೆ ರೂ. 2-75	6.5 ಕಿ.ಮೀ.ನ ಮೊದಲ ಹಂತಕ್ಕೆ ರೂ.3-00 (ಪ್ರತಿ ಕಿ.ಮೀ.ಗೆ ಸರಾಸರಿ 46 ಪೈಸೆ), ಎರಡನೇ ಹಂತ ಮತ್ತು ಆ ನಂತರದ ಹಂತಗಳಲ್ಲಿ ಸರಾಸರಿ ಪ್ರತಿ ಕಿ.ಮೀ.ಗೆ 40 ಪೈಸೆಯಂತೆ ನಿಗಧಿಪಡಿಸಲಾಗಿದೆ.